# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :1344

ಸದಸ್ಯರ ಹೆಸರು : ಶ್ರೀ ಕಿಶೋರ್ ಕುಮಾರ್ ಪುತ್ತೂರ್

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮಜರಾಯಿ ಸಚಿವರು

ಉತ್ತರಿಸುವ ದಿನಾಂಕ : 19.03.2025

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಕಳೆದ 3 ವರ್ಷಗಳಲ್ಲಿ ಬಸ್‌ಗಳ ನಿರ್ವಹಣೆಗಾಗಿ ವೆಚ್ಚ ಮಾಡಿರುವ ಹಣ ಎಷ್ಟು; (ನಿಗಮವಾರು ವಿವರ ನೀಡುವುದು) | ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ ಕಳೆದ 3 ವರ್ಷಗಳಲ್ಲಿ ಬಸ್‌ಗಳ ನಿರ್ವಹಣೆಗಾಗಿ ವೆಚ್ಚ ಮಾಡಿರುವ ಹಣದ ವಿವರ ಕೆಳಗಿನಂತಿದೆ. (ರೂ.ಲಕ್ಷಗಳಲ್ಲಿ) |

**(ರೂ.ಲಕ್ಷಗಳಲ್ಲಿ)**

| ಸಂಸ್ಥೆ | ವರ್ಷ | | |
|---|---|---|---|
| | 2021-22 | 2022-23 | 2023-24 |
| ಕ.ರಾ.ರ.ಸಾ.ನಿಗಮ | 3497.70 | 3321.81 | 4608.81 |
| ಬೆಂ.ಮ.ಸಾ.ಸಂಸ್ಥೆ | 6548.00 | 8600.00 | 9372.00 |
| ವಾ.ಕ.ರ.ಸಾ.ಸಂಸ್ಥೆ (ದುರಸ್ತಿ) | 17414.17 | 22381.38 | 25885.22 |
| ಕ.ಕ.ರ.ಸಾ.ನಿಗಮ | 5143.00 | 8110.00 | 9242.00 |
| **ಒಟ್ಟು** | **32602.87** | **42413.19** | **49108.03** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಆ. | ಕಳೆದ 3 ವರ್ಷದಿಂದ ರಾಜ್ಯಾದ್ಯಂತ ಎಷ್ಟು ಬಸ್‌ಗಳು ನಿರ್ವಹಣೆ ಕೊರತೆ ಕಾರಣದಿಂದಾಗಿ ರಸ್ತೆ ಮಧ್ಯದಲ್ಲಿ ಕೆಟ್ಟು ನಿಂತಿವೆ; (ನಿಗಮವಾರು ವಿವರ ನೀಡುವುದು) | ರಾಜ್ಯ ರಸ್ತೆ ಸಾರಿಗೆ ನಿಗಮಗಳಲ್ಲಿ ಕಳೆದ 03 ವರ್ಷಗಳಲ್ಲಿ ರಸ್ತೆ ಮಧ್ಯದಲ್ಲಿ ಕೆಟ್ಟು ನಿಂತ ಬಸ್‌ಗಳ ಸಂಖ್ಯೆ ಹಾಗೂ ಪ್ರತಿ 10,000 ಕಾರ್ಯಾಚರಣಾ ಕಿ.ಮೀ.ಗೆ ಪ್ರಮಾಣದ ವಿವರಗಳು ಈ ಕೆಳಕಂಡಂತಿವೆ:- |

| ನಿಗಮಗಳು | ಬಸ್‌ಗಳ ಸಂಖ್ಯೆ | | |
|---|---|---|---|
| | 2021-22 | 2022-23 | 2023-24 |
| ಕ.ರಾ.ರ.ಸಾ.ನಿ | 990 | 998 | 786 |
| ಬೆಂ.ಮ.ಸಾ.ಸಂ | 52 | 36 | 37 |
| ವಾ.ಕ.ರ.ಸಾ.ಸಂ | 525 | 1008 | 1022 |
| ಕ.ಕ.ರ.ಸಾ.ನಿ | 751 | 1308 | 1354 |
| **ಒಟ್ಟು** | **2318** | **3350** | **3199** |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>
<table>
<tr><th>ನಿಗಮ</th><th colspan="3">ಪ್ರತಿ 10,000 ಕಿಮೀಗೆ ರಸ್ತೆ ಮಧ್ಯೆ ಕೆಟ್ಟು ನಿಂತ ವಾಹನಗಳ ಪ್ರಮಾಣ</th></tr>
<tr><th></th><th>2021-22</th><th>2022-23</th><th>2023-24</th></tr>
<tr><td>ಕ.ರಾ.ರ.ಸಾ.ನಿ</td><td>0.02</td><td>0.01</td><td>0.01</td></tr>
<tr><td>ಬೆಂ.ಮ.ಸಾ.ಸಂ</td><td>0.00</td><td>0.00</td><td>0.00</td></tr>
<tr><td>ವಾ.ಕ.ರ.ಸಾ.ಸಂ</td><td>0.01</td><td>0.02</td><td>0.02</td></tr>
<tr><td>ಕ.ಕ.ರ.ಸಾ.ನಿ</td><td>0.02</td><td>0.02</td><td>0.02</td></tr>
<tr><td>ಒಟ್ಟು</td><td>0.01</td><td>0.01</td><td>0.01</td></tr>
</table>
ಬಸ್‌ಗಳು ಮಾರ್ಗ ಮಧ್ಯೆ ಅನಿವಾರ್ಯ ಕಾರಣಗಳಿಂದ ಕೆಟ್ಟು ನಿಂತಾಗ ಸದರಿ ಬಸ್‌ನಲ್ಲಿ ಇರುವ ಪ್ರಯಾಣಿಕರಿಗೆ ಬದಲಿ ಬಸ್ಸಿನ ವ್ಯವಸ್ಥೆ ಮಾಡಲಾಗುತ್ತದೆ ಹಾಗೂ ಕೆಟ್ಟು ನಿಂತ ಬಸ್ಸುಗಳನು ಕೂಡಲೇ ದುರಸ್ಥಿ ಮಾಡಲು ಕ್ರಮ ವಹಿಸಲಾಗುತ್ತದೆ.<br><br>
ಮುಂದುವರೆದು, ನಿಗಮಗಳಲ್ಲಿ ಬಸ್ ನಿರ್ವಹಣಾ ಕಾರ್ಯಗಳನ್ನು ನಿಯಮಿತವಾಗಿ ಮಾಡಿ ಮಾರ್ಗ ನಿಯೋಜನೆ ಮಾಡಲಾಗುತ್ತದೆ ಹಾಗೂ 10 ಲಕ್ಷ ಕ್ರಮಿಸಿರುವ ಬಸ್‌ಗಳನ್ನು ಪುನಶ್ಚೇತನ ಮಾಡಿ ಉಪಯೋಗಿಸಲಾಗುತ್ತಿದೆ.
</td></tr>
<tr><td>ಇ.</td><td>ಬಸ್‌ಗಳು ರಸ್ತೆಗಳಲ್ಲಿ ಕೆಟ್ಟು ನಿಲ್ಲುವುದರಿಂದ ಪ್ರಯಾಣಿಕರಿಗೆ ತೀವ್ರ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಬಸ್‌ಗಳ ನಿರ್ವಹಣೆ ಕೊರತೆ ಸರಿಪಡಿಸಲು ಯಾವ ಕ್ರಮ ಕೈಗೊಳ್ಳಲಾಗುವುದು;</td><td>
ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:<br>
ನಿಗಮವು ನವೀನ ತಾಂತ್ರಿಕತೆಯುಳ್ಳ ಬಸ್‌ಗಳನ್ನು ಸೇರ್ಪಡೆಗೊಳಿಸಿ ಮಾರ್ಗ ಕಾರ್ಯಾಚರಣೆ ಮಾಡಲಾಗುತ್ತಿದ್ದು, ವಿಭಾಗದ ಘಟಕಗಳಿಂದ ಬಸ್‌ಗಳನ್ನು ಮಾರ್ಗ ಕಾರ್ಯಾಚರಣೆಗೆ ನಿಯೋಜಿಸುವ ಮುನ್ನ ಬಸ್‌ಗಳಿಗೆ ಕೈಗೊಳ್ಳಬೇಕಾಗಿರುವ ನಿಯತಕಾಲಿಕ ದೈನಂದಿನ, ವಾರಾಂತ್ಯ ಹಾಗೂ ಡಾಕಿಂಗ್ ನಿರ್ವಹಣೆ ಹಾಗೂ ಇಂಜಿನ್ ಆಯಿಲ್ ಗಳ ಬದಲಾವಣೆಯನ್ನು ಸಕಾಲಕ್ಕೆ ತಪ್ಪದೆ ಕೈಗೊಂಡು ಬಸ್‌ಗಳ ಶುಚಿತ್ವ & ತಾಂತ್ರಿಕ ಸುಸ್ಥಿತಿಯ ಬಗ್ಗೆ ಪರಿಶೀಲಿಸಿ ಸ್ವಚ್ಛ ಹಾಗೂ ದೋಷರಹಿತವಾಗಿರುವುದನ್ನು ಖಾತರಿಪಡಿಸಿಕೊಂಡ ನಂತರವೇ ಮಾರ್ಗದ ಕಾರ್ಯಾಚರಣೆಗೆ ನಿಯೋಜಿಸಲಾಗುತ್ತಿದೆ.<br><br>
ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ತಾಂತ್ರಿಕ ಸಿಬ್ಬಂದಿಗಳೊಂದಿಗೆ ಹೊರಗುತ್ತಿಗೆ ತಾಂತ್ರಿಕ ಸಿಬ್ಬಂದಿಗಳನ್ನು ನಿಯೋಜಿಸಿ ಬಸ್ ತಯಾರಿಕಾ ಸಂಸ್ಥೆ ಮತ್ತು ನಿಗಮದ ತರಬೇತಿ ಕೇಂದ್ರಗಳಲ್ಲಿ ಕಾಲ ಕಾಲಕ್ಕೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಬಸ್‌ಗಳ ಉತ್ತಮ ತಾಂತ್ರಿಕ ನಿರ್ವಹಣಾ ವಿಧಾನಗಳನ್ನು ತಯಾರಿಕಾ ಕಂಪನಿಯವರು ಸೂಚಿಸಿರುವಂತೆ
</td></tr>
</table>

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಅನುಸರಿಸಿ ಬಸ್‌ಗಳು ರಸ್ತೆಗಳಲ್ಲಿ ಕೆಟ್ಟು ನಿಲ್ಲುವುದನ್ನು ನಿಯಂತ್ರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>ನಿಗಮದ ಬಸ್‌ಗಳನ್ನು ನಿಯಮಾನುಸಾರ ಅರ್ಹತಾ ಪತ್ರ ನವೀಕರಣ ಹಾಗೂ ವಾರ್ಷಿಕ ನಿರ್ವಹಣೆಗೆ ಒಳಪಡಿಸಿ ಎಲ್ಲಾ ದುರಸ್ಥಿ ಕಾರ್ಯಗಳನ್ನು ಕೈಗೊಂಡು ಸುಸ್ಥಿತಿಯಲ್ಲಿರಿ ಕಾರ್ಯಾಚರಣೆ ಗೊಳಿಸಲಾಗುತ್ತಿದೆ<br>**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ:-**<br>ಸಂಸ್ಥೆಯಲ್ಲಿ ಎಲ್ಲಾ ಮಾದರಿಯ ಬಸ್ಸುಗಳನ್ನು ದೈನಂದಿನ ಮತ್ತು ಹತ್ತು ದಿನಗಳ ನಿರ್ವಹಣೆಯಂತಹ ಮುನ್ನೆಚ್ಚರಿಕಾ ನಿರ್ವಹಣೆ ಹಾಗೂ ವಿವಿಧ ಹಂತದ ನಿಯತಕಾಲಿಕ ನಿರ್ವಹಣೆಗಳಿಗೆ ಒಳಪಡಿಸಲಾಗುತ್ತಿದ್ದು, ದೋಷಗಳು ಕಂಡುಬಂದಲ್ಲಿ ಅಥವಾ ವರದಿಯಾದಲ್ಲಿ ತಕ್ಷಣವೇ ದುರಸ್ತಿಗೊಳಪಡಿಸಿ, ನಂತರವಷ್ಟೇ ಕಾರ್ಯಾಚರಣೆ ಮಾಡಲಾಗುತ್ತಿರುತ್ತದೆ.<br><br>ಅದಲ್ಲದೇ, ರಹದಾರಿ ನವೀಕರಣದ ಸಂದರ್ಭದಲ್ಲಿ ಬಸ್ಸುಗಳ ಕವಚ ದೋಷಗಳನ್ನು ಪರಿಶೀಲಿಸಿ ಪುನಃಶ್ಚೇತನಗೊಳಿಸ ಲಾಗುತ್ತಿರುತ್ತದೆ ಹಾಗೂ ಸಂಸ್ಥೆಯಲ್ಲಿ ಭೌತಿಕ ಮತ್ತು ತಾಂತ್ರಿಕವಾಗಿ ಸುಸ್ಥಿತಿಯಲ್ಲಿರುವ ಹಾಗೂ ಆಚರಣೆಗೆ ಯೋಗ್ಯವಾಗಿರುವ ಬಸ್ಸುಗಳನ್ನು ಮಾತ್ರ ಮಾರ್ಗಗಳಲ್ಲಿ ಕಾರ್ಯಾಚರಿಸಲಾಗುತ್ತಿದೆ.<br>**ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ:-**<br>ಯಾವುದೇ ಬಸ್ ಮಾರ್ಗ ಮಧ್ಯೆ ಅನಿವಾರ್ಯ ಕಾರಣಗಳಿಂದ ಕೆಟ್ಟು ನಿಂತಲ್ಲಿ ಅವುಗಳನ್ನು ತುರ್ತಾಗಿ ದುರಸ್ತಿ ಪಡಿಸಲು ಕ್ರಮ ಕೈಗೊಳ್ಳುತ್ತಿರುವುದರ ಜೊತೆಗೆ ಸಾರ್ವಜನಿಕರ ಪ್ರಯಾಣಕ್ಕೆ ತೊಂದರೆಯಾಗದಂತೆ ಕ್ರಮ ವಹಿಸಲಾಗುತ್ತಿದೆ.<br>ಸಾರಿಗೆ ಪ್ರಾಧಿಕಾರದಿಂದ ಅರ್ಹತಾ ಪ್ರಮಾಣ ಪತ್ರ ಹೊಂದಿದ ಹಾಗೂ ಸುಸ್ಥಿತಿಯಲ್ಲಿರುವ ಬಸ್‌ಗಳನ್ನು ಮಾರ್ಗದ ಮೇಲೆ ಕಾರ್ಯಾಚರಣೆ ಮಾಡಲಾಗುತ್ತಿದೆ.<br>ಬಸ್‌ಗಳನ್ನು ಮಾರ್ಗ ಕಾರ್ಯಾಚರಣೆಗೆ ಮುಂಚೆ ಮತ್ತು ಮಾರ್ಗ ಕಾರ್ಯಾಚರಣೆ ನಂತರ ಮೂಲ ಉತ್ಪಾದಕರ ಶಿಫಾರಸ್ಸಿನಂತೆ ಬಸ್‌ಗಳ ದೈನಂದಿನ ಹಾಗೂ ಕಾಲಕಾಲಿಕ ನಿರ್ವಹಣೆಗಳನ್ನು ಕೈಗೊಂಡು ಯಾಂತ್ರಿಕವಾಗಿ ಸುಸ್ಥಿತಿಯಲ್ಲಿರುವ ಬಸ್‌ಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | **ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ:-**<br>ನಿಗಮದಲ್ಲಿ ಬಸ್ಸುಗಳನ್ನು ಯಾಂತ್ರಿಕವಾಗಿ ಸುಸ್ಥಿತಿಯಲ್ಲಿಡಲು ಬಸ್ ತಯಾರಕ ಕಂಪನಿಯ ಶಿಫಾರಸ್ಸಿನಂತೆ, ದೈನಂದಿನ, ವಾರದ ಹಾಗೂ ಇತರೆ ನಿರ್ವಹಣೆ ಕಾರ್ಯಗಳನ್ನು ಕಡ್ಡಾಯವಾಗಿ ಕೈಗೊಳ್ಳಲಾಗುತ್ತಿದೆ. ಅಲ್ಲದೆ ಬಸ್ಸುಗಳನ್ನು ಸುಸ್ಥಿತಿಯಲ್ಲಿಡಲು ತಾಂತ್ರಿಕ ಸಿಬ್ಬಂದಿಗಳಿಗೆ, ತಾಂತ್ರಿಕ ಮೇಲ್ವಿಚಾರಕರಿಗೆ ಹಾಗೂ ಅಧಿಕಾರಿಗಳಿಗೆ ಸರಬರಾಜು ಕಂಪನಿಗಳಿಂದ ಬಸ್ಸುಗಳನ್ನು ನಿರ್ವಹಣೆ ಮಾಡುವ ಬಗ್ಗೆ ಮೇಲಿಂದ ಮೇಲೆ ತರಬೇತಿ ಕಾರ್ಯಗಳನ್ನು ಏರ್ಪಡಿಸಲಾಗುತ್ತಿದೆ. ಆದರೆ, ಗ್ರಾಮೀಣ ಪ್ರದೇಶದ ಕೆಲವು ಹಳ್ಳಿಗಳ ರಸ್ತೆ ಸರಿಯಾಗಿಲ್ಲದೆ ಇರುವುದರಿಂದ ಹಾಗೂ ಮಳೆಗಾಲದಲ್ಲಾಗುವ ಮಳೆಯಿಂದಾಗಿ ರಸ್ತೆಗಳ ಸ್ಥಿತಿಗತಿ ಕೆಟ್ಟು ಹೋಗುವ ಪ್ರಯುಕ್ತ ಬಸ್‌ಗಳ ಟೈರ್ ಪಂಕ್ಚರ್, ಸ್ಪ್ರಿಂಗ್ ಬ್ಲೇಡ್ ಕಟ್ಟಾಗುವಿಕೆ ಇತ್ಯಾದಿಗಳಿಂದಾಗಿ ಅನಿವಾರ್ಯವಾಗಿ ಕೆಟ್ಟುನಿಲ್ಲಲು ಕಾರಣವಾಗುತ್ತವೆ. ಆದಾಗ್ಯೂ ಸಹ ಬಸ್‌ಗಳ ಉತ್ತಮ ಸ್ಥಿತಿಯತ್ತ ಹೆಚ್ಚು ಗಮನಹರಿಸಲಾಗುತ್ತಿದೆ. ಬಸ್ಸಿನ ಸ್ಥಿತಿ ಉತ್ತಮವಾಗಿರುವ ಬಗ್ಗೆ ಖಾತ್ರಿ ಪಡಿಸಿಕೊಂಡ ನಂತರವೇ ಬಸ್‌ಗಳನ್ನು ಮಾರ್ಗದ ಮೇಲೆ ನಿಯೋಜಿಸುವಂತೆ ಕ್ರಮ ಕೈಗೊಳ್ಳಲಾಗಿದೆ. |
| ಈ. | ಕಳೆದ 3 ವರ್ಷಗಳಲ್ಲಿ ವಿವಿಧ ನಿಗಮಗಳಲ್ಲಿ ಎಷ್ಟು ಹೊಸ ಬಸ್‌ಗಳನ್ನು ಖರೀದಿಸಲಾಗಿದೆ. (ನಿಗಮವಾರು ಮಾಹಿತಿ ನೀಡುವುದು) | ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ ಕಳೆದ 4 ವರ್ಷಗಳಲ್ಲಿ ಖರೀದಿಸಿರುವ ಹೊಸ ಬಸ್‌ಗಳ ವಿವರ ಕೆಳಕಂಡಂತಿದೆ: |

| ಸಂಸ್ಥೆ | ವರ್ಷ | | | | ಒಟ್ಟು |
|---|---|---|---|---|---|
| | 2021-22 | 2022-23 | 2023-24 | 2024-25 | |
| ಕ.ರಾ.ರ.ಸಾ.ನಿಗಮ | 00 | 20 | 467 | 698 | **1185** |
| ಬೆಂ.ಮ.ಸಾ.ಸಂಸ್ಥೆ | 625 | 448 | 345 (325 GCC) | 2004 (1184 GCC) | **3422** |
| ವಾ.ಕ.ರ.ಸಾ.ಸಂಸ್ಥೆ | 00 | 00 | 296 | 560 | **856** |
| ಕ.ಕ.ರ.ಸಾ.ನಿಗಮ | 00 | 00 | 722 | 303 | **1025** |
| **ಒಟ್ಟು** | **625** | **468** | **1830** | **3565** | **6488** |

ಸಂಖ್ಯೆ: ಟಿಡಿ 85 ಟಿಸಿಕ್ಯೂ 2025

**(ರಾಮಲಿಂಗಾರೆಡ್ಡಿ)**

ಸಾರಿಗೆ ಮತ್ತು ಮುಜರಾಯಿ ಸಚಿವರು